ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಛೇರಿ ಆದೇಶ ಸಂ: ಬಿ12(5)/ಪಿಆರ್/35/2020-21 ದಿನಾಂಕ: 21-09-2020 ರಂತೆ ದಿನಾಂಕ: 10-02-2021 ರಂದು ಹಗದೂರು ವಾರ್ಡ್ ಸಂ: 84ರ ವಾರ್ಡ್ ಕಮಿಟಿಯು ಡಾ|| ಟಿ.ಎಂ.ರಮೇಶ್, ನೊಡಲ್ ಅಧಿಕಾರಿಗಳು, ರವರ ಅಧ್ಯಕ್ಷತೆಯಲ್ಲಿ ನಡೆದಿರುವ ಸಭೆಯ ನಡುವಳಿಗಳು:

**ಹಾಜರಿದ್ದ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು**

1. ನೊಡಲ್ ಅಧಿಕಾರಿಗಳು
2. ಸಹಾಯಕ ಕಾರ್ಯಪಾಲಕ ಅಭಿಯಂತರರು, ಎಸ್.ಡಬ್ಲ್ಯೂ.ಡಿ/ಬಿ.ಡಬ್ಲ್ಯೂ.ಎಸ್.ಎಸ್.ಬಿ
3. ಸಹಾಯಕ ಅಭಿಯಂತರರು, ವಾರ್ಡ್ ನಂ: 84 ಹಗದೂರು, ಬಿ.ಬಿ.ಎಂ.ಪಿ ಬೆಂಗಳೂರು
4. ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ
5. ಕಂದಾಯ ಪರಿವೀಕ್ಷಕರು, ಬಿಬಿಎಂಪಿ
6. ಹಿರಿಯ/ಕಿರಿಯ ಆರೋಗ್ಯ ನಿರೀಕ್ಷಕರರು, ವಾರ್ಡ್ ನಂ: 84 ಹಗದೂರು, ಬಿ.ಬಿ.ಎಂ.ಪಿ ಬೆಂಗಳೂರು
7. ವೈಧ್ಯಾಧಿಕಾರಿಗಳು, ಸಿದ್ದಾಪುರ /ಹಗದೂರು ಆರೋಗ್ಯ ಕೇಂದ್ರ
8. ಹಿರಿಯ/ಕಿರಿಯ ಆರೋಗ್ಯ ನಿರೀಕ್ಷಕರು, ಆರೋಗ್ಯ ಕೇಂದ್ರ
9. ಹಗದೂರು ವಾರ್ಡಿನ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದವರು ಮತ್ತು ಸಾರ್ವಜನಿಕರು

1. ಇಂಪಿರಿಯಲ್ ಹೋಟೆಲ್ ಬ್ರೂಕ್ ಬಾಂಡ್ ಆರೋಗ್ಯ ಅಧಿಕಾರಿಗಳು ನೋಟೀಸ್ ಕೊಟ್ಟಿರುತ್ತಾರೆ. ವೈಟ್‌ಫೀಲ್ಡ್ ಪೊಲೀಸ್ ಇಲಾಖೆಯವರು ಕೈಗೊಂಡಿದ್ದು, ಹೋಟೆಲ್‌ನವರು ಚಿಮ್ಮಣಿಯನ್ನು ಬೇರೆ ಕಡೆಗೆ ತಿರುಗಿಸಿರುತ್ತಾರೆ ಎಂದು ತಿಳಿಸಿರುತ್ತಾರೆ.

   ಕ್ರಮ: ಸಹಾಯಕ/ಕಿರಿಯ ಆರೋಗ್ಯ ನಿರೀಕ್ಷಕರು,

2. ಶಕ್ತಿ ಕೇಂದ್ರದ ಗಾಂಧೀಪುರ ಗ್ರಾಮದವರು ಕೋರಿರುವ ಮೇರೆಗೆ ಬೀದಿ ವ್ಯಾಪಾರಿಗಳನ್ನು ತೆರವುಗೊಳಿಸುವ ಕಾರ್ಯವನ್ನು ಟ್ರಾಫಿಕ್ ಪೋಲೀಸ್, ಆರೋಗ್ಯ ಅಧಿಕಾರಿಗಳು ಹಾಗೂ ಸಹಾಯಕ ಅಭಿಯಂತರರು ಮತ್ತು ಗ್ಯಾಂಗ್‌ಮೇನ್‌ಗಳನ್ನೊಳಗೊಂಡು ದಿನಾಂಕ: 16-02-2021 ರಂದು ನಿಗಧಿಪಡಿಸಲಾಗಿತ್ತು.

   ಕ್ರಮ: ಸಹಾಯಕ ಅಭಿಯಂತರರು, ವಾರ್ಡ್ ನಂ: 84,

3. ಇನ್ನರ್ ಸರ್ಕಲ್ & ಡಾಸ್ಕ್‌ವರ್ತ ಬಡಾವಣೆ ಸುತ್ತಮುತ್ತಲಿನ ಸ್ಟ್ರೀಟ್‌ಲೈಟ್ ಉರಿಯದೆ ಇರುವುದು ಇದನ್ನು ಬೆಸ್ಕಾಂ ಅಧಿಕಾರಿಗಳು ಸರಿಪಡಿಸಲು ಕ್ರಮ ವಹಿಸಲಾಗುತ್ತಿದೆ.

   ಕ್ರಮ: ಸಹಾಯಕ ಅಭಿಯಂತರರು, ಬೆಸ್ಕಾಂ

4. ಬೀದಿ ನಾಯಿಗಳ ಹಾವಳಿಯನ್ನು ತಡೆಯಲು ಡಾ|| ಸುರೇಶ್ ರವರನ್ನು ಸಂಪರ್ಕಿಸಲು ಸೂಚಿಸಲಾಯಿತು.

   ಕ್ರಮ: ವೆಟನರಿ ಡಾಕ್ಟರ್

5. ಗಾಂಧೀಪುರ ಸಮುದಾಯ ಭವನದ ಹತ್ತಿರ ಹಾಗೂ 5ನೇ ಅಡ್ಡ ರಸ್ತೆಯಲ್ಲಿ ಬೋರ್‌ವೆಲ್‌ಗೆ ಹೊಸದಾಗಿ ಮೋಟಾರನ್ನು ಅಳವಡಿಸುವ ಬಗ್ಗೆ.

   ಕ್ರಮ: ಸಹಾಯಕ ಅಭಿಯಂತರರು, ವಾರ್ಡ್ ನಂ: 84,

6. ಇಮ್ಮಡಿಹಳ್ಳಿಯ ಆರ್.ಓ.ಪ್ಲಾಟ್ ಹತ್ತಿರ, ಕಾಲೇಜಿನ ಹತ್ತಿರ ಹಾಗೂ ಗಣೇಶ ದೇವಸ್ಥಾನದ ಹತ್ತಿರ ಹೊಸದಾಗಿ ಕೊಳವೆಬಾವಿ ಕೊರೆಸುವುದು.

   ಕ್ರಮ: ಸಹಾಯಕ ಅಭಿಯಂತರರು, ವಾರ್ಡ್ ನಂ: 84,

7. ಸುಬ್ಬಣ್ಣ, ನೀರು ಸರಬರಾಜುದಾರರು ತಿಳಿಸಿರುವಂತೆ 20 ಲೇತ್ ಪೈಪ್‌ಲೈನ್ ಕೈತೋಟದ ಹತ್ತಿರ ಬೇಕೆಂದು ತಿಳಿಸಿರುತ್ತಾರೆ.

ಕ್ರಮ: ಸಹಾಯಕ ಅಭಿಯಂತರರು, ವಾರ್ಡ್ ನಂ: 84,

8. ವಿಜಯನಗರ ಗಣೇಶ್ ದೇವಸ್ಥಾನದ ಹತ್ತಿರ ಹೊಸ ಪಂಪ್‌ಮೋಟರ್ ಅಳವಡಿಸುವುದು, ಹಿಂದೂ ಸ್ಮಶಾನದ ಹತ್ತಿರ ಹೊಸ ಪ್ಯಾನಲ್ ಬೋರ್ಡ್ ಮತ್ತು ವೈಯರಿಂಗ್ ಹೊಸದಾಗಿ ಅಳವಡಿಸುವುದು ಮತ್ತು ಸ್ಮಶಾನದ ಹತ್ತಿರ ಬೋರ್‌ವೆಲ್ ರಿಪೇರಿ ಕೆಲಸ ಮಾಡಿಸುವುದು.

ಕ್ರಮ: ಸಹಾಯಕ ಅಭಿಯಂತರರು, ವಾರ್ಡ್ ನಂ: 84,

9. ಸಿದ್ದಾಪುರ ಪಟೇಲ್ ಬಡಾವಣೆಯಲ್ಲಿ ಹೊಸದಾಗಿ ಬೋರ್‌ವೆಲ್ ಕೊರೆಸುವುದು.

ಕ್ರಮ: ಸಹಾಯಕ ಅಭಿಯಂತರರು, ವಾರ್ಡ್ ನಂ: 84,

10. ಆರ್.ಓ. ಪ್ಲಾಟ್‌ನ ನೀರು ಸರಬರಾಜು ಸಮಸ್ಯೆ ಕುರಿತಂತೆ ಗುತ್ತಿಗೆದಾರರಿಗೆ ತಿಳಿಸುವುದು.

ಕ್ರಮ: ಸಹಾಯಕ ಅಭಿಯಂತರರು, ವಾರ್ಡ್ ನಂ: 84,

11. ನಾಗೊಂಡನಹಳ್ಳಿ ಹಾಲಿ ಇರುವ ಬೋರ್‌ವೆಲ್‌ಗೆ ಹೊಸದಾಗಿ ಕೇಬಲ್ ಅಳವಡಿಸುವುದು.

ಕ್ರಮ: ಸಹಾಯಕ ಅಭಿಯಂತರರು, ವಾರ್ಡ್ ನಂ: 84,

12. ವಿಜಯನಗರದಿಂದ ಖಾನೆ ರಸ್ತೆ ವರೆಗೆ ಬಿ.ಡಬ್ಲ್ಯೂ.ಎಸ್.ಎಸ್.ಬಿ ಯು.ಜಿ.ಡಿ ಕೆಲಸ ನಿರ್ವಹಿಸುವುದು.

ಕ್ರಮ: ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ

13. ಗಾಂಧೀಪುರದಲ್ಲಿ ಬಿಟ್ಟುಹೋಗಿರುವ ಕಡೆಯಲ್ಲಿ ಕವರಿಂಗ್ ಸ್ಲಾಬ್ ಅಳವಡಿಸುವುದು ಮತ್ತು ಸಮುದಾಯ ಭವನದ ಹತ್ತಿರು ಅಡ್ಡ ಮೋರಿ ನಿರ್ಮಿಸುವುದು.

ಕ್ರಮ: ಸಹಾಯಕ ಅಭಿಯಂತರರು, ವಾರ್ಡ್ ನಂ: 84,

14. ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆಯಿಂದ ಅಗೆದಿರುವ ವಾರ್ಡ್‌ನ ಎಲ್ಲಾ ರಸ್ತೆಗಳನ್ನು ರೆಸ್ಟೋರೇಷನ್ ಶೀಘ್ರವಾಗಿ ನಿರ್ವಹಿಸುವಂತೆ ಸೂಚಿಸಲಾಯಿತು.

ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ

15. ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆಯಿಂದ ಸಾಯಿ ಬಡಾವಣೆಯಿಂದ ಬೈರಪ್ಪ ಬಡಾವಣೆ ವರೆಗೆ ಒಳಚರಂಡಿ ಕಾಮಗಾರಿ ನಿರ್ವಹಿಸುತ್ತಿದ್ದು, ಸದರಿ ಸಾಯಿ ಬಡಾವಣೆಯಲ್ಲಿ 12 ಇಂಚಿನ ಪೈಪ್ ಅಳವಡಿಸುತ್ತಿದ್ದು, ಬೈರಪ್ಪ ಬಡಾವಣೆಯಲ್ಲಿ 8 ಇಂಚಿನ ಪೈಪ್ ಹಾಕಿದ್ದು, ಇದನ್ನು 12 ಇಂಚಿನ ಪೈಪ್ ಹಾಕುವುದಾಗಿ ತಿಳಿಸಿರುತ್ತಾರೆ.

ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ

16. ಬೈರಪ್ಪ ಬಡಾವಣೆಯಲ್ಲಿ ಚರಂಡಿ ಮತ್ತು ಅಡ್ಡ ಮೋರಿ ಕಾಮಗಾರಿಯನ್ನು ಪ್ರಾರಂಭಿಸುವಂತೆ ತಿಳಿಸಲಾಯಿತು.

ಕ್ರಮ: ಸಹಾಯಕ ಅಭಿಯಂತರರು, ವಾರ್ಡ್ ನಂ: 84,

17. ಗಾಂಧೀಪುರ 5ನೇ ಅಡ್ಡ ರಸ್ತೆ ದಲ್ಲಿ ಅಡ್ಡ ಮೋರಿಯಲ್ಲಿ ಹೂಳು ಮತ್ತು ಮಣ್ಣು ತುಂಬಿದ್ದು, ಇದನ್ನು ತೆರವುಗೊಳಿಸುವುದು ಮತ್ತು ಸ್ಲಾಬ್ ಅಳವಡಿಸುವುದು.

ಕ್ರಮ: ಸಹಾಯಕ ಅಭಿಯಂತರರು, ವಾರ್ಡ್ ನಂ: 84,

18. ವಿಜಯನಗರ ಮುಖ್ಯರಸ್ತೆಯ ಚರಂಡಿಯ ಮೇಲೆ ನಿರ್ಮಿಸಿರುವ ಅನಧಿಕೃತ ಶೀಟ್ ಮನೆಗಳನ್ನು ತೆರವುಗೊಳಿಸುವುದು.

ಕ್ರಮ: ಸಹಾಯಕ ಅಭಿಯಂತರರು, ವಾರ್ಡ್ ನಂ: 84,

19. ಚಿಕನ್ ಅಂಗಡಿ_ಮೌಲಾಸ್ ಸುರಬ್ ಡೀಲರ್ಸ್ ರವರು ಅಂಗಡಿಯಿಂದ ಉಳಿಯುವ ತ್ಯಾಜ್ಯವನ್ನು ಚರಂಡಿಯನ್ನು ಹಾಕುತ್ತಿದ್ದು, ಇದರಿಂದ, ನಿವಾಸಿಗಳಿಗೆ ಹಾಗೂ ಮಕ್ಕಳ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರುತ್ತಿರುವುದರಿಂದ, ಇದನ್ನು ನಿಲ್ಲಿಸಲು ಹಾಗೂ ಎಲ್ಲಾ ಚಿಕನ್ ಅಂಗಡಿಗಳಿಗೆ ಸೂಚನೆ ನೀಡುವುದು ಮತ್ತು ಕ್ರಮ ವಹಿಸುವಂತೆ ಸೂಚಿಸಲಾಯಿತು.

ಕ್ರಮ: ಸಹಾಯಕ/ಕಿರಿಯ ಆರೋಗ್ಯ ನಿರೀಕ್ಷಕರು,

20. ಸಿದ್ದಾಪುರ ಗ್ರಾಮದ ಕುಡಿಯುವ ನೀರಿನ ಸಮಸ್ಯೆಯನ್ನು ಸರಿಪಡಿಸುವುದು.

ಕ್ರಮ: ಸಹಾಯಕ ಅಭಿಯಂತರರು, ವಾರ್ಡ್ ನಂ: 84,

21. ನಾಗೊಂಡನಹಳ್ಳಿ ಅಡ್ಡರಸ್ತೆಗಳಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆಯ ಒಳಚರಂಡಿ-ಚೇಬರ್ ನಿರ್ಮಾಣ ಮಾಡುವುದು.

ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ

22. ಇಮ್ಮಡಿಹಳ್ಳಿ-ವೆಂಕಟರಮಣ ಮನೆ ಹತ್ತಿರ ಮತ್ತು ದೇವಸ್ಥಾನದ ಹತ್ತಿರ ಚರಂಡಿಗಳಲ್ಲಿನ ಹೂಳನ್ನು ತೆಗೆದು ಸ್ಲಾಬ್ ಅಳವಡಿಸುವುದ.

ಕ್ರಮ: ಸಹಾಯಕ ಅಭಿಯಂತರರು, ವಾರ್ಡ್ ನಂ: 84,

**ವಾರ್ಡ್ ಕಮಿಟಿ ನೋಡಲ್ ಅಧಿಕಾರಿ ಮತ್ತು ಕಾರ್ಯದರ್ಶಿಗಳು, ನೌಕರರು, ಪದಾಧಿಕಾರಿಗಳು ಹಾಗೂ ಸಾರ್ವಜನಿಕರು ಈ ಮೇಲ್ಕಂಡಂತೆ ತಿಳಿಸಿರುವ ಸಭೆಯಲ್ಲಿ ಕೈಗೊಂಡ ತೀರ್ಮಾನದಂತೆ ಹಾಗೂ ನಿರ್ಣಯಗಳಂತೆ ಹಗದೂರು ವಾರ್ಡ್ ನಂ:84 ವ್ಯಾಪ್ತಿಯಲ್ಲಿ ಕೆಲಸ ಕಾರ್ಯಗಳನ್ನು ಆಧ್ಯತೆ ಮೇರೆಗೆ ನಿರ್ವಹಿಸಲು ಸೂಚಿಸಲಾಯಿತು,**

ಹಗದೂರು ವಾರ್ಡ ನಂ:84 ರ ವಾರ್ಡ್ ಕಮಿಟಿಯ ಕಾರ್ಯದರ್ಶಿಯವರಾದ ಡಾ॥ ಟಿ.ಎಂ.ರಮೇಶ್, ನೋಡಲ್ ಅಧಿಕಾರಿಗಳು, ರವರು ಸಭೆಯಲ್ಲಿ ತೆಗೆದುಕೊಂಡ ನಿರ್ಣಯದಂತೆ ಕಾರ್ಯನಿರ್ವಹಿಸಲು ಕೋರುತ್ತಾ, ವಂದನಾರ್ಪಣೆಯನ್ನು ಸಲ್ಲಿಸಿ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**ಕಾರ್ಯದರ್ಶಿ**
**ಸಹಾಯಕ ಅಭಿಯಂತರರು**
**ವಾರ್ಡ್ ನಂ: 84 ಹಗದೂರು**

**ಪ್ರತಿಯನ್ನು**

1. ಮಾನ್ಯ ಜಂಟಿ ಆಯುಕ್ತರು, ಬಿ.ಬಿ.ಎಂ.ಪಿ ಮಹದೇವಪುರ ವಲಯ,ರವರ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ಮುಖ್ಯ ಅಭಿಯಂತರರು, ಬಿ.ಬಿ.ಎಂ.ಪಿ ಮಹದೇವಪುರ ವಲಯ,ರವರ ಮಾಹಿತಿಗಾಗಿ ಸಲ್ಲಿಸಿದೆ.
3. ಮಾನ್ಯ ಡಿ.ಹೆಚ್.ಓ ಬಿ.ಬಿ.ಎಂ.ಪಿ ಮಹದೇವಪುರ ವಲಯ, ರವರ ಸೂಕ್ತ ಮಾಹಿತಿ/ಕ್ರಮಕ್ಕಾಗಿ ಸಲ್ಲಿಸಿದೆ.
4. ಎಲ್ಲಾ ಅಧಿಕಾರಿ ಸಿಬ್ಬಂದಿಗಳ ಕ್ರಮಕ್ಕಾಗಿ.
5. ಎಲ್ಲಾ ಕಮಿಟಿ ಸದಸ್ಯರುಗಳ ಮಾಹಿತಿಗಾಗಿ
6. ಕಛೇರಿ ಪ್ರತಿ.